# ಕೃಷ್ಣಮೃಗ ಹಾರಿತು ನೋಡಿದಿರಾ...

ಬೆಂಗಳೂರಿನ ಸುತ್ತಮುತ್ತಲ ಪ್ರವಾಸಿ ತಾಣಗಳ ತಲಾಷಿನಲ್ಲಿದ್ದ ನನ್ನ ಕಣ್ಣಿಗೆ ಅಂತರ್ಜಾಲದಲ್ಲಿ ಕಾಣಿಸಿದ್ದು, ಮಧುಗಿರಿ ತಾಲ್ಲೂಕಿನ ಜಯಮಂಗಲಿ ಮೈದನಹಳ್ಳಿ ಕೃಷ್ಣ ಮೃಗಧಾಮ. ಮಧುಗಿರಿಯ ದಾರಿಯಲ್ಲಿ ಸಾಕಷ್ಟು ಬಾರಿ ಹಾದುಹೋಗಿದ್ದೆ. ಮಧುಗಿರಿ ಎಂದರೆ ಏಷ್ಯಾದಲ್ಲೇ ಏಕಶಿಲಾ ಪರ್ವತ ಮತ್ತು ಹೆಚ್ಚು ಬಿಸಿಲಿರುವ ಪ್ರದೇಶ ಎಂದುಕೊಂಡಿದ್ದೆ. ಈಗ ಕೃಷ್ಣ ಮೃಗಧಾಮದ ವಿಷಯ ತಿಳಿದು ಕುತೂಹಲ ಹೆಚ್ಚಾಯಿತು. ಎಲೆಮರೆಯ ಕಾಯಿಯಂತಿರುವ ಈ ಸ್ಥಳವನ್ನು ನೋಡಲೇಬೇಕೆಂದು ಕುತೂಹಲ ಮತ್ತು ಹಟ ಹೆಚ್ಚಾಯಿತು.

ಬೆಂಗಳೂರಿನಿಂದ ಸುಮಾರು 106 ಕಿ.ಮೀ. ದೂರದಲ್ಲಿರುವ ಈ ಪ್ರದೇಶಕ್ಕೆ ಹೊರಟೆ. ಅಂತರ್ಜಾಲದಲ್ಲಿ ಯಾರೋ, 'ಈ ಧಾಮವನ್ನು ನೋಡಲು ಬೆಳಿಗ್ಗೆ ಅಥವಾ ಸೂರ್ಯಾಸ್ತದ ಸಮಯಲ್ಲಿ ಹೋದರೆ ಒಳ್ಳೆಯದು' ಎಂದು ಬರೆದಿದ್ದರು. ಹಾಗಾಗಿ ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿನಿಂದ ಹೊರಟು ಗೌರೀಬಿದನೂರಿನ ಮಾರ್ಗವಾಗಿ ಈ ಸ್ಥಳ ತಲುಪಿದೆ.

ಮೈದನಹಳ್ಳಿ ಕೃಷ್ಣ ಮೃಗಧಾಮದ ಪ್ರವೇಶದಲ್ಲಿ, ಅರಣ್ಯ ರಕ್ಷಣಾ ಸಿಬ್ಬಂದಿಯನ್ನು ಆ ಜಾಗದ ಬಗ್ಗೆ ವಿಚಾರಿಸಿದೆ. ಅದು ಸುಮಾರು 15 ಕಿ.ಮೀ ಸುತ್ತಳತೆಯ ಪ್ರದೇಶ. ಅಲ್ಲಲ್ಲಿ ಎತ್ತರವಾದ ಗುಡ್ಡಗಳು. ವಿವಿಧ ಜಾತಿಯ ಸಸ್ಯ ಸಂಕುಲಗಳ ಮಧ್ಯೆ ಹುಲ್ಲುಗಾವಲು. 2015ರ ಗಣತಿಯ ಪ್ರಕಾರ 500ರಿಂದ 600 ಕೃಷ್ಣಮೃಗಗಳು ಅಲ್ಲಿವೆ.

ಅರಣ್ಯದೊಳಗೆ ಪ್ರವೇಶಿಸಿ, ಒಂದು

**'ಜಯಮಂಗಲಿ ಮೈದನಹಳ್ಳಿ ಕೃಷ್ಣ ಮೃಗಧಾಮ' ತುಮಕೂರು ಜಿಲ್ಲೆ ಮಧುಗಿರಿಗೆ ಸಮೀಪದ ಜೈವಿಕಧಾಮ. ಇಲ್ಲಿನ ಶಾಂತ ಹಾಗೂ ಸ್ವಚ್ಛ ವಾತಾವರಣ ಕೃಷ್ಣಮೃಗಗಳ ಸಂತತಿ ರಕ್ಷಣೆಗೆ ಪೂರಕವಾಗಿದೆ.**

**■ ರಾಜು ಎಲ್.ಎಸ್.**

ಮರದ ಕೆಳಗೆ ಕೃಷ್ಣಮೃಗಗಳ ಬರುವಿಕೆಯನ್ನು ನಿರೀಕ್ಷಿಸುತ್ತಾ ನಿಂತೆ. ಅರ್ಧ ತಾಸಿನ ನಂತರ ಸುಮಾರು 200 ಮೀ. ದೂರದ ದಿಬ್ಬದ ಮೇಲೆ ಒಂದು ಕೃಷ್ಣಮೃಗ ಕಾಣಿಸಿತು. ತಕ್ಷಣ ನನ್ನ ಕ್ಯಾಮೆರಾ ಎಚ್ಚರಗೊಂಡಿತು. ಕ್ಯಾಮೆರಾ ಝೂಮ್ ಮಾಡಿ ನೋಡಿದರೆ... ಅಬ್ಬಾ ಎಂತಹ ನೋಟ... ಸುರುಳಿಯಾಕಾರದ ಎರಡು ಕೊಂಬುಗಳು... ಕಪ್ಪು, ಬಿಳಿ ಮತ್ತು ಕಂದು ಬಣ್ಣದಿಂದ ಕೂಡಿದ ಕೃಷ್ಣಮೃಗ.

ಹತ್ತಿರದಿಂದ ನೋಡುವ ಆಸೆಯಿಂದ ಸ್ವಲ್ಪ ಮುಂದೆ ಚಲಿಸಿದೆ. ಏನೋ ಅಪಾಯ ಬರುತ್ತಿದೆಯೆಂದು ಚಂಗನೆ ನೆಗೆದು ಓಡಿಹೋಯಿತು. ಅದರ ಓಟ ಮತ್ತು ನೆಗೆತವನ್ನು ನೋಡಿಯೇ ಆನಂದಿಸಬೇಕು.

ಸಮಯ ಸರಿಯುತ್ತಿದ್ದಂತೆ ಸುಮಾರು 15 ಕೃಷ್ಣಮೃಗಗಳು ಕಾಣಿಸಿದವು. ಇವು 2–3 ಅಡಿ ಎತ್ತರದ ಪ್ರಾಣಿಗಳು. ಕೊಂಬು ಸೇರಿದರೆ 5 ಅಡಿ ಎತ್ತರ. ಇಂಗ್ಲಿಷ್‌ನಲ್ಲಿ ಕೃಷ್ಣಮೃಗಗಳಿಗೆ 'ಬ್ಲ್ಯಾಕ್ ಬಕ್' ಎಂದು ಹೆಸರು. ಜೆನಸ್ ಆನ್ಟಿಲೋಪ್ ವರ್ಗಕ್ಕೆ ಸೇರಿದ ಇವನ್ನು, 'ಇಂಡಿಯನ್ ಆನ್ಟಿಲೋಪ್' ಎನ್ನುತ್ತಾರೆ. ಭಾರತ, ನೇಪಾಳ ಮತ್ತು ಪಾಕಿಸ್ತಾನದಲ್ಲಿ ಹೆಚ್ಚಾಗಿ ವಾಸಿಸುತ್ತದೆ.

ಗಂಡು ಕೃಷ್ಣಮೃಗ 30ರಿಂದ 60 ಕೆ.ಜಿ. ಮತ್ತು ಹೆಣ್ಣು 25ರಿಂದ 40 ಕೆ.ಜಿ. ತೂಕವಿರುತ್ತದೆ. ಸಾಮಾನ್ಯವಾಗಿ ಗಂಡು ಕೃಷ್ಣಮೃಗ, ಇನ್ನೊಂದು ಗಂಡು ಕೃಷ್ಣಮೃಗ ತನ್ನ ವ್ಯಾಪ್ತಿಗೆ ಬರುವುದನ್ನು ಇಷ್ಟಪಡುವುದಿಲ್ಲ. ತನ್ನ ವ್ಯಾಪ್ತಿಗೆ ಮೇವು ಹುಡುಕಿಕೊಂಡು ಬಂದ ಹೆಣ್ಣು ಕೃಷ್ಣಮೃಗವನ್ನು ಆಕರ್ಷಿಸಿ ಸೇರುತ್ತದೆ. ಇದರ ಜೀವಿತಾವಧಿ 10ರಿಂದ 15 ವರ್ಷ. ಸಂತತಿ ಕ್ಷೀಣವಾಗುತ್ತಿರುವುದರಿಂದ ಕೃಷ್ಣಮೃಗವನ್ನು 'ರಾಷ್ಟ್ರೀಯ ಸಂರಕ್ಷಿತ ಪ್ರಾಣಿ' ಎಂದು ಘೋಷಿಸಲಾಗಿದೆ.

ಮೈದನಹಳ್ಳಿ ಕೃಷ್ಣ ಮೃಗಧಾಮದ ಅಲ್ಲಲ್ಲಿ ನೀರಿಗಾಗಿ ಹೊಂಡ ನಿರ್ಮಿಸಿದ್ದಾರೆ. ಅರಣ್ಯ ಇಲಾಖೆಯ ಮುತುವರ್ಜಿಯಿಂದ ಸಸ್ಯ ಸಂಕುಲಗಳು ಹೆಚ್ಚಾಗುತ್ತಿವೆ. ಇಲ್ಲಿ ಪ್ರವಾಸಿಗರಿಗೆ ಕುಡಿಯಲು ತಿನ್ನಲು ಏನೂ ಸಿಗುವುದಿಲ್ಲ. ಹಾಗಾಗಿ ಇದು ತುಂಬಾ ಸ್ವಚ್ಛವಾಗಿರುವ ಧಾಮ.

ಈ ಪ್ರದೇಶದ ಸುತ್ತ ದೂರದಲ್ಲಿ ಬೆಟ್ಟಗುಡ್ಡಗಳು ಕಾಣುತ್ತದೆ. ಸೂರ್ಯಾಸ್ತದ ಸಮಯದಲ್ಲಿ, ಈ ಪ್ರದೇಶ ರಮಣೀಯವಾಗಿ ಕಾಣುತ್ತದೆ. ■



